# ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

## ಶುದ್ಧ ಕ್ರಯಪತ್ರ (ಮನೆಗಳು : ಫ್ಲ್ಯಾಟ್‌ಗಳು)

ಸನ್ __________ ದ ಇಸವಿ ______________________ ತಿಂಗಳು ______________ ದಿನಾಂಕದಂದು ಮೊದಲನೆಯ ಪಕ್ಷಕಾರರಾದ ಈ ಪತ್ರದಲ್ಲಿ ಇನ್ನು ಮುಂದೆ ಮಾರಾಟಗಾರರು (ಮಾರಾಟಗಾರರು ಶಬ್ದವು ಅವರ ಉತ್ತರಾಧಿಕಾರಿಗಳು, ಹಸ್ತಾಂತರಣಕಾರರು ಮುಂತಾದವರನ್ನು ಒಳಗೊಳ್ಳುತ್ತದೆ) ಎಂದು ಕರೆಯಲಾಗಿರುವ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಇದನ್ನು ಪ್ರತಿನಿಧಿಸುವ ಅದರ ಉಪಕಾರ್ಯದರ್ಶಿಯವರು ಎರಡನೆಯ ಪಕ್ಷಕಾರರಾದ ಈ ಪತ್ರದಲ್ಲಿ ಇನ್ನು ಮುಂದೆ ಖರೀದಿದಾರ (ಖರೀದಿದಾರ ಎಂಬ ಶಬ್ದವು ಆತನ / ಆಕೆಯ ವಾರಸುದಾರರು, ಉತ್ತರಾಧಿಕಾರಿಗಳು ಮತ್ತು ಹಸ್ತಾಂತರಣಕಾರರು ಮುಂತಾದವರನ್ನು ಒಳಗೊಳ್ಳುತ್ತದೆ ) ಎಂದು ಕರೆಯಲಾಗಿರುವ ______________________________ ಎಂಬಲ್ಲಿ ವಾಸವಾಗಿರುವ ಶ್ರೀ / ಶ್ರೀಮತಿ ______________________________________________ ______________ ಎಂಬುವವರ ಮಗನಾದ / ಮಗಳಾದ / ಹೆಂಡತಿಯಾದ ಸುಮಾರು ______________________________ ____________________________ ವರ್ಷ ವಯಸ್ಸಿನ ಶ್ರೀ / ಶ್ರೀಮತಿ ______________________________________ __________________________ ಎಂಬುವವರಿಗೆ ಬರೆದುಕೊಟ್ಟ ಶುದ್ಧ ಕ್ರಯಪತ್ರದ ಕ್ರಮವೇನೆಂದರೆ :

ಮಾರಾಟಗಾರರಾದ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವನ್ನು ಪ್ರತಿನಿಧಿಸುವ ಉಪ ಕಾರ್ಯದರ್ಶಿಯವರು ಆ ಸಾಮರ್ಥ್ಯದಲ್ಲಿ ಷೆಡ್ಯೂಲ್ ಸ್ವತ್ತನ್ನು ಖರೀದಿದಾರರಿಗೆ ಮಾರಾಟ ಮಾಡಿದ್ದು, ಖರೀದಿದಾರರು (ಎರಡನೆಯ ಪಕ್ಷಕಾರರು) ಷೆಡ್ಯೂಲ್ ಮನೆಯ / ಫ್ಲ್ಯಾಟಿನ ಪೂರ್ಣ ಬೆಲೆಯಾದ ______________________________ ರೂಪಾಯಿಗಳನ್ನು (______________________ __________________________ ರೂಪಾಯಿಗಳು) ಪಾವತಿ ಮಾಡಿರುವುದಲ್ಲದೆ ________________ ಸಬ್ ರಿಜಿಸ್ಟ್ರಾರ್‌ರವರ ಕಚೇರಿಯಲ್ಲಿ __________________________ ದಿನಾಂಕದಂದು __________________ ಪುಸ್ತಕದ ____________________ ಸಂಪುಟದ ______________________ ರಿಂದ ____________ ಪುಟಗಳಲ್ಲಿ ____________ ಸಂಖ್ಯೆಯಾಗಿ ನೋಂದಾಯಿಸಲಾಗಿರುವ ಗುತ್ತಿಗೆ ಹಾಗೂ ಮಾರಾಟ ಒಪ್ಪಂದ ಪತ್ರವನ್ನು ಸಲ್ಲಿಸಿರುತ್ತಾರೆ ಮತ್ತು ಸದರಿ ಮನೆಯ / ಫ್ಲ್ಯಾಟ್‌ನ ವಾಸ್ತವಿಕ ಸ್ವಾಧೀನತೆಯನ್ನು ________________________ ರಂದು ಖರೀದಿದಾರರಿಗೆ ವಹಿಸಿಕೊಡಲಾಗಿದೆ.

________________________ ಬಡಾವಣೆಯಲ್ಲಿರುವ ______________________ ಸಂಖ್ಯೆಯ ಮನೆಯನ್ನು / ಫ್ಲ್ಯಾಟ್‌ನ್ನು ಖರೀದಿದಾರರಿಗೆ ಹಂಚಿಕೆ ಮಾಡಲಾಗಿದ್ದು, ಮಾರಾಟಗಾರರು ಖರೀದಿದಾರರೊಂದಿಗೆ ಈ ಮೂಲಕ ಈ ಮುಂದಿನಂತೆ ಒಡಂಬಡಿಕೆ ಮಾಡಿಕೊಳ್ಳುತ್ತಾರೆ.

1. ಈ ಸಂಬಂಧ ಸರ್ಕಾರವು ಹೊರಡಿಸಿರುವ ಆದೇಶಗಳ ಅನುಸಾರವಾಗಿ ಮತ್ತು ಮನೆಯ / ಫ್ಲ್ಯಾಟ್‌ನ ಪೂರ್ಣ ಬೆಲೆಯನ್ನು ಖರೀದಿದಾರರು ಪಾವತಿ ಮಾಡಿರುವುದನ್ನು ಪರಿಗಣಿಸಿ ಸದರಿ ಮನೆಯ / ಫ್ಲ್ಯಾಟ್‌ನ ಪೂರ್ಣ ಮತ್ತು ಏಕೈಕ ಹಕ್ಕುದಾರರಾದ ಮಾರಾಟಗಾರರು ಈ ಪತ್ರದ ಷೆಡ್ಯೂಲ್ ಹೆಚ್ಚು ನಿರ್ದಿಷ್ಟವಾಗಿ ಮತ್ತು ವಿಶದವಾಗಿ ವಿವರಿಸಲಾಗಿರುವ ________________________ ಬಡಾವಣೆಯಲ್ಲಿರುವ ಮನೆಯ / ಫ್ಲ್ಯಾಟ್‌ನ ಪೂರ್ಣ ಅಧಿಕಾರ, ಹಕ್ಕು, ಮತ್ತು ಹಿತಾಸಕ್ತಿಯನ್ನು ಈ ಕ್ರಯಪತ್ರದ ಮೂಲಕ ಖರೀದಿದಾರರಿಗೆ ಈ ಮೂಲಕ ವಹಿಸಿಕೊಟ್ಟಿದ್ದಾರೆ ಮತ್ತು ವರ್ಗಾಯಿಸಿದ್ದಾರೆ. ಖರೀದಿದಾರರು ಸದರಿ ಮನೆಯ ಸಂಪೂರ್ಣ ಮಾಲೀಕರಾಗಿ ಅದನ್ನು ಹೊಂದಿ ಅನುಭವಿಸಿಕೊಂಡು ಹೋಗತಕ್ಕದ್ದು. ಖರೀದಿದಾರರಿಗೆ ಸದರಿ ಮನೆಯ / ಫ್ಲ್ಯಾಟ್‌ನ ವಾಸ್ತವಿಕ ಸ್ವಾಧೀನತೆಯನ್ನು ____________________ ರಂದು ನೀಡಲಾಗಿದೆ.

2. ಎರಡನೆಯ ಪಕ್ಷಕಾರರು ಈ ಮುಂದಿನ ಷರತ್ತುಗಳಿಗೊಳಪಟ್ಟು ಷೆಡ್ಯೂಲ್ ಮನೆಯ / ಫ್ಲ್ಯಾಟ್‌ನ ಸ್ವಾಮ್ಯವನ್ನು ಹೊಂದಿ ಅದರಿಂದ ಬರುವ ಬಾಡಿಗೆ ಮತ್ತು ಲಾಭ ಮುಂತಾದವುಗಳನ್ನು ಅನುಭವಿಸಿಕೊಂಡು ಹೋಗತಕ್ಕದ್ದು.

   (i) ಹಂಚಿಕೆ ಮಾಡಲಾಗಿರುವ ಕಟ್ಟಡವನ್ನು : ಫ್ಲ್ಯಾಟ್‌ನ್ನು ಪೂರ್ಣವಾಗಿ ಮಾನವ ವಾಸಕ್ಕಾಗಿ ಬಳಸತಕ್ಕದ್ದು. ಅಂಗಡಿಯಾಗಿ ಅಥವಾ ಕಟ್ಟಡವಾಗಿ ಅಥವಾ ಮನೆಯಾಗಿ ಅಥವಾ ಯಾಂತ್ರಿಕ ಶಕ್ತಿಯಿಂದ ಅಥವಾ ಬೇರೆ ರೀತಿಯಿಂದ ತಯಾರಿಕಾ ಕಾರ್ಯಗಳನ್ನು ನಡೆಸಲಾಗುತ್ತಿರುವ ಕಟ್ಟಡವಾಗಿ ಬಳಸುವಂಥ ಯಾವುದೇ ಭಾಗಗಳನ್ನು ಸದರಿ ಕಟ್ಟಡಕ್ಕೆ ಹೊಂದಿಕೊಂಡಂತೆ ಅಥವಾ ಹೊಂದಿಕೊಂಡಿರದಂತೆ ನಿರ್ಮಾಣ ಮಾಡತಕ್ಕದ್ದಲ್ಲ.

# ಷೆಡ್ಯೂಲ್ 'ಎ'

_______________ ಬಡಾವಣೆಯ _______________ ಹಂತ _______________ ಘಟ್ಟದಲ್ಲಿರುವ _______________ ಬಿ. ಡಿ.ಎ. ಸಂಖ್ಯೆಯುಳ್ಳ ಕಟ್ಟಡ ಸಹಿತವಾದ ಭೂಮಿಯನ್ನು ಒಳಗೊಂಡ ಪೂರ್ವ ಪಶ್ಚಿಮ _______________ ಚ.ಅ./ಚ.ಮೀ. ಉತ್ತರ : ದಕ್ಷಿಣ _______________ ಚ.ಅ./ಚ.ಮೀ. ಅಳತೆಯ ಒಟ್ಟು_______________ ಚ.ಅ./ಚ.ಮೀ. ವಿಸ್ತೀರ್ಣಉಳ್ಳ ಸ್ವತ್ತಿಗೆ ಚಕ್ಕಬಂದಿ.

ಪೂರ್ವಕ್ಕೆ : ಪಶ್ಚಿಮಕ್ಕೆ :

ಉತ್ತರಕ್ಕೆ : ದಕ್ಷಿಣಕ್ಕೆ :

# ಷೆಡ್ಯೂಲ್ 'ಬಿ'

_______________ ಚ.ಅ./ಚ.ಮೀ. ವಿಸ್ತೀರ್ಣವುಳ್ಳ `ಎ' ಷೆಡ್ಯೂಲ್ ಸ್ವತ್ತಿನಲ್ಲಿನ ಅವಿಭಾಜ್ಯ ಪಾಲು, ಅಧಿಕಾರ, ಹಕ್ಕು, ಹಿತಾಸಕ್ತಿ ಮತ್ತು ಒಡೆತನ ಷೆಡ್ಯೂಲ್ 'ಬಿ' ಸ್ವತ್ತಿನ (ಪ್ಲ್ಯಾಟ್) ಬೆಲೆ_______________ ರೂಪಾಯಿಗಳು.

# ಷೆಡ್ಯೂಲ್ 'ಸಿ'

ಷೆಡ್ಯೂಲ್ 'ಎ' ಸ್ವತ್ತಿನ ಲ್ಲಿ ಕಟ್ಟಿರುವ _______________ ಬಡಾವಣೆಯ _______________ ಹಂತದ _______________ ಘಟ್ಟದ _______________ನಲ್ಲಿರುವ _______________ ಮಹಡಿಯಲ್ಲಿನ _______________ ಸಂಖ್ಯೆಯ ಇಡೀ ವಾಸದ ಪ್ಲ್ಯಾಟ್ ಮತ್ತು _______________ ಚ.ಅ./ಚ.ಮೀ. ವಿಸ್ತೀರ್ಣವುಳ್ಳ ಕಟ್ಟಡ. ಸೂಪರ್ ನಿರ್ಮಾಣ ವಿಸ್ತೀರ್ಣದಲ್ಲಿ ಪ್ಯಾಸೇಜುಗಳು, ಲಾಭಿಗಳು, ಸ್ಟೇರ್‌ಕೇಸ್‌ಗಳು ಮತ್ತಿತರ ಸಮಾನ ಬಳಕೆ ಪ್ರದೇಶಗಳು ಒಳಗೊಳ್ಳುತ್ತವೆ. ಗೋಡೆಯನ್ನು ಇಟ್ಟಿಗೆ ಮತ್ತು ಸಿಮೆಂಟ್‌ನಿಂದ ಕಟ್ಟಿರುವ _______________ _______________ನೆಲಗಟ್ಟನ್ನು, ಆರ್‌ಸಿಸಿ ಛಾವಣಿ ಮತ್ತು ಮರದ ಬಾಗಿಲು ಮತ್ತು _______________ ಕಿಟಕಿಗಳನ್ನು ಹೊಂದಿರುವ ಪ್ಲ್ಯಾಟ್. ವಿದ್ಯುತ್, ನೀರು ಮತ್ತು ನೈರ್ಮಲ್ಯ ಸಂಪರ್ಕ ಕಲ್ಪಿಸಲಾಗಿದೆ.

ಚಕ್ಕುಬಂದಿ

ಪೂರ್ವಕ್ಕೆ : ಪಶ್ಚಿಮಕ್ಕೆ :

ಉತ್ತರಕ್ಕೆ : ದಕ್ಷಿಣಕ್ಕೆ :

ಇದಕ್ಕೆ ಸಾಕ್ಷಿಯಾಗಿ ಮಾರಾಟಗಾರರು ಬೆಂಗಳೂರಿನಲ್ಲಿ ಮೇಲೆ ತಿಳಿಸಿದ ದಿನಾಂಕ ತಿಂಗಳು ವರ್ಷದಂದು ತಮ್ಮ ಸಹಿಯನ್ನು ಹಾಕಿರುತ್ತಾರೆ.

**ಸಾಕ್ಷಿದಾರರು :**

1.

2.

3.

ಉಪಕಾರ್ಯದರ್ಶಿ

**ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ,**

ಬೆಂಗಳೂರು.